**1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರ ಮತ್ತು ಜೆ ಎಂ ಎಫ್ ಸಿ ರವರ ನ್ಯಾಯಾಲಯ, ಭದ್ರಾವತಿ**

**ಸಿ ಸಿ ಸಂಖ್ಯೆ: 691/2025**

**ದೋಷಾರೋಪಣೆ**

ಶ್ರೀ ಹನುಮಂತ ಜಿ.ಹೆಚ್. ಬಿ.ಎ.ಎಲ್., ಎಲ್‌ಎಲ್.ಎಮ್., 1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ, ಭದ್ರಾವತಿ ಆದ ನಾನು

1. ಶ್ರೀ ಜಬಿವುಲ್ಲಾ
   ಬಿನ್ ಅಲ್ಲು ಬಾಬು,
   ವಯಸ್ಸು 50 ವರ್ಷ,
   ವಾಸಃ ನೋರಾನಿ ಮೊಹಲ್ಲಾ ರಸ್ತೆ,
   ದೊಣಬಘಟ್ಟ ಗ್ರಾಮ,
   ಭದ್ರಾವತಿ ತಾಲ್ಲೂಕು, ಶಿವಮೊಗ್ಗ.

2. ಶ್ರೀ ಸಲ್ಮಾನ್ ಬಿನ್ ಜಬಿವುಲ್ಲಾ,
   ವಯಸ್ಸು 23 ವರ್ಷ,
   ವಾಸಃ 2 ನೇ ಕ್ರಾಸ್, ನೋರಾನಿ ಮೊಹಲ್ಲಾ ರಸ್ತೆ,
   ದೊಣಬಘಟ್ಟ ಗ್ರಾಮ,
   ಭದ್ರಾವತಿ ತಾಲ್ಲೂಕು, ಶಿವಮೊಗ್ಗ.

3. ಶ್ರೀ ಸಕ್ಲೈನ್ ಯಾನೆ ಸಕ್ಲೈನ್ ಮುಸ್ತಕ್
   ಬಿನ್ ಜಬಿವುಲ್ಲಾ,
   ವಯಸ್ಸು 20 ವರ್ಷ,
   ವಾಸಃ ನೋರಾನಿ ಮೊಹಲ್ಲಾ ರಸ್ತೆ,
   ದೊಣಬಘಟ್ಟ ಗ್ರಾಮ,
   ಭದ್ರಾವತಿ ತಾಲ್ಲೂಕು, ಶಿವಮೊಗ್ಗ.

4. ಶ್ರೀಮತಿ ಶಮೀಮ್ ಬಾನು
ಕೋಂ ಜಬಿವುಲ್ಲಾ,
ವಯಸ್ಸು 40 ವರ್ಷ,
ವಾಸಃ 2 ನೇ ಕ್ರಾಸ್, ನೋರಾನಿ ಮೊಹಲ್ಲಾ ರಸ್ತೆ,
ಭಧ್ರಾವತಿ ತಾಲ್ಲೂಕು, ಶಿವಮೊಗ್ಗ.

ಎಂಬ ಆರೋಪಿತರಾದ ನಿಮ್ಮ ಮೇಲೆ ಈ ಕೆಳಗಿನಂತೆ ಹೊರಿಸುವ ದೋಷಾರೋಪ ಎನೆಂದರೆಃ-

ಮೊದಲನೆಯದಾಗಿ, ದಿನಾಂಕ 22.02.2025 ರಂದು ಮಧ್ಯಾಹ್ನ 04.00 ಗಂಟೆ ಸಮಯದಲ್ಲಿ, ಭಧ್ರಾವತಿ ಗ್ರಾಮಾಂತರ ಪೋಲಿಸ್ ಠಾಣಾ ವ್ಯಾಪ್ತಿಯ, ಭಧ್ರಾವತಿ ತಾಲ್ಲೂಕು, ದೊಣಬಘಟ್ಟ ಗ್ರಾಮದ, ಅಬ್ದುಲ್ ರಿಯಾಜ್ ರವರಿಗೆ ಸೇರಿದ ಸರ್ವೆ ನಂ.41/1 ರ ಅಡಿಕೆ ತೋಟದ ಖಾಲಿ ಜಾಗದಲ್ಲಿ, ಸಮಾನ ಉದ್ದೇಶದಿಂದ, ಆರೋಪಿತರಾದ ನೀವು ಚಾಸಾ-1/ಜಬೀವುಲ್ಲಾ, ಚಾಸಾ-2/ಬಲ್ಕಿಶ್ ಬಾನು, ಚಾಸಾ-3/ಬೇಗಂ ಬಿ ಯಾನೆ ಬೇಗುಬಿ, ಚಾಸಾ-4/ಖಿಜರ್ ಅಲಿ ಮತ್ತು ಚಾಸಾ-5/ಬಿಬಿಜಾನ್ ರವರೊಂದಿಗೆ ಜಗಳ ತೆಗೆದು ಅವರನ್ನು ಉದ್ದೇಶಿಸಿ, "ಸೂಳೇ ಮಕ್ಕಳಾ ಬೋಳಿ ಮಕ್ಕಳಾ" ಎಂದು ಅವ್ಯಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ನೆಮ್ಮದಿಗೆ ಭಂಗ ಉಂಟು ಮಾಡುವ ಮೂಲಕ ಭಾರತೀಯ ನ್ಯಾಯ ಸಂಹಿತ ಕಲಂ 352 ಸಹ ಕಲಂ 3(5) ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಎರಡನೇಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ, ಸಮಾನ ಉದ್ದೇಶದಿಂದ, 1 ನೇ ಆರೋಪಿತರಾದ ನೀವು ಕೈಗಳಿಂದ ಚಾಸಾ–2 ರವರ ಎಡ ಹಾಗೂ ಬಲಭುಜಕ್ಕೆ ಹೊಡೆದಿದ್ದು, 3 ನೇ ಆರೋಪಿತರಾದ ನೀವು ಕೈಗಳಿಂದ ಚಾಸಾ–4 ಮತ್ತು 5 ರವರ ಮೈಕೈಗೆ ಹೊಡೆದಿದ್ದು, 4 ನೇ ಆರೋಪಿತರಾದ ನೀವು ಚಾಸಾ–3 ರವರ ಎಡಗೈ ಹೆಬ್ಬೆರಳಿನ ಹತ್ತಿರ ಬಾಯಿಯಿಂದ ಕಚ್ಚಿ ಅವರಿಗೆ ಸಾದಾ ಸ್ವರೂಪದ ನೋವುಂಟು ಮಾಡುವ ಮೂಲಕ ಭಾರತೀಯ ನ್ಯಾಯಾ ಸಂಹಿತೆ ಕಲಂ 115(2) ಸಹ ಕಲಂ 3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಮೂರನೇಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ, ಸಮಾನ ಉದ್ದೇಶದಿಂದ, 1 ನೇ ಆರೋಪಿತರಾದ ನೀವು ಚಾಸಾ–2 ರವರ ಕೂದಲನ್ನು ಹಿಡಿದು ಎಳೆದಾಡಿ, ಅವರಿಗೆ ಅವಮಾನ ಉಂಟು ಮಾಡುವ ಮೂಲಕ ಭಾರತೀಯ ನ್ಯಾಯ ಸಂಹಿತ ಕಲಂ 74 ಸಹ ಕಲಂ 3(5)ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ನಾಲ್ಕನೇಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ, ಸಮಾನ ಉದ್ದೇಶದಿಂದ, 1 ನೇ ಆರೋಪಿತರಾದ ನೀವು ಕಬ್ಬಿಣದ ಮಚ್ಚಿನಿಂದ ಚಾಸಾ–1 ಮತ್ತು 3 ರವರ ತಲೆಗೆ ಹೊಡೆದಿದ್ದು, 3 ನೇ ಆರೋಪಿತರಾದ ನೀವು

ಕಲ್ಲಿನಿಂದ ಚಾಸಾ-4 ಹಾಗೂ 5 ರವರ ಮೈಕೈಗೆ ಹೊಡೆದು, ಅವರಿಗೆ ಸಾಮಾನ್ಯ ಸ್ವರೂಪದ ಗಾಯ ಉಂಟು ಮಾಡುವ ಮೂಲಕ ಭಾರತೀಯ ನ್ಯಾಯ ಸಂಹಿತ ಕಲಂ 118(1) ಸಹ ಕಲಂ 3(5)ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಕೊನೆಯದಾಗಿ, ಮೇಲೆ ಹೇಳಿದ ದಿನ, ಸಮಯ ಮತ್ತು ಸ್ಥಳದಲ್ಲಿ, ಸಮಾನ ಉದ್ದೇಶದಿಂದ, ಆರೋಪಿತರಾದ ನೀವು ಚಾಸಾ-1 ರಿಂದ 5 ರವರಿಗೆ ಜೀವ ಬೆದರಿಕೆ ಉಂಟು ಮಾಡುವ ಮೂಲಕ ಭಾರತೀಯ ನ್ಯಾಯಾ ಸಂಹಿತೆ ಕಲಂ 351(2) ಸಹ ಕಲಂ 3(5) ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿದ್ದು, ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ನಾನು ಈ ಮೇಲಿನ ದೋಷಾರೋಪಣೆಗಳ ಮೇಲೆ ಈ ನ್ಯಾಯಾಲಯದ ವಿಚಾರಣೆಗೆ ನೀವು ಗುರಿಯಾಗಬೇಕೆಂದು ನಿರ್ದೇಶಿಸುತ್ತೇನೆ.

**(ಹನುಮಂತ ಜಿ.ಹೆಚ್.)**

ದಿನಾಂಕಃ 07.08.2026

**1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ, ಭದ್ರಾವತಿ.**